

ಉಕ್ರೇನಿನ ಪ್ರಮದೆಯರು ತೆರೆದೆದೆಯ ಪ್ರತಿಭಟನೆ ಮಾಡಿದರೆ, ಪೊಲೀಸರು ಮರ್ರ್ಯಾದೆ ಮರೆಮಾಚಲು ಅಪ್ಪಿಕೋ ಚಳವಳಿ ನಡೆಸಬೇಕಾಯಿತು. ಅಲ್ಲಿರುವ ರಷ್ಯನ್ ರಾಯಭಾರ ಕಚೇರಿ ಅಧಿಕಾರಿಗಳ ಕಾರುಗಳ ಮೇಲಿರುವ ನೀಲಿ ದೀಪದ ಮೇಲೆ ಈ ಕನಕಾಂಗಿಯರ ಕೆಂಗಣ್ಣು ಬಿದ್ದಿದೆ. ನೀಲಿ ದೀಪದಿಂದ ಅಪಘಾತಗಳು ಜಾಸ್ತಿಯಂತೆ. ಅದಕ್ಕೇ ತಮ್ಮೆದೆಗೂ ನೀಲಿ ಬಣ್ಣ ಬಳಿದುಕೊಂಡರು. ಅಲ್ಲಿಯೂ ಅಪಘಾತಗಳು ಜಾಸ್ತಿಯಾದರೆ...!

ದ.ಆಫ್ರಿಕಾದಲ್ಲಿ ವಿಶ್ವಕಪ್ ಫುಟ್‌ಬಾಲ್ ಭರಾಟೆ. ಆ ಜ್ವರದ ಸೋಂಕು ಚೀನಾಗೆ ಜಾಸ್ತಿ ತಗುಲಿದಂತೆ ಕಾಣುತ್ತದೆ. ಆ ತಾಪವನ್ನು ಕಡಿಮೆ ಮಾಡಲು ಬರೀ ನೀರು ಸಾಕಾಗಲಿಲ್ಲ ಈ ವನಿತೆಯರಿಗೆ. ಕೆಸರಿನಲ್ಲಿ ಕಾಲ್ಚೆಂಡು ಒದೆದು ಮೋಜು ಅನುಭವಿಸಿದರು. ಆದರೆ ಪುಕ್ಕಟೆ ಮನರಂಜನೆಯಲ್ಲ ಇದು, ಟಿಕೆಟ್ ತಗೊಂಡರೆ ಮಾತ್ರ ರಾಡಿಯ ರಂಗಿನ ಜೊತೆ ರಂಗೀಲಾಗಳ ಅಂದ ಸವಿಯಲು ಅವಕಾಶ. ಚೀನಿಯರು ಕೆಸರಿನಿಂದಲೂ ಕಾಸು ಸಂಪಾದಿಸುತ್ತಾರೆ ಬಿಡಿ.



ನ್ಯೂಯಾರ್ಕ್ ಬಸ್ ಚಾಲಕರು ಸಂಬಳಸಹಿತ ರಜೆ ಪಡೆಯುವುದು ಸುಲಭ. ಪ್ರಯಾಣಿಕರಿಗೆ ಕೋಪ ಬರುವಂತೆ ಮಾಡಿ ಉಗಿಸಿಕೊಂಡರಾಯಿತು. ಎರಡು ತಿಂಗಳು ರಜಾದ ಮಜಾ ಉಡಾಯಿಸಬಹುದು. ಕಳೆದ ವರ್ಷ ಪ್ರತಿಯೊಬ್ಬ ಚಾಲಕನೂ ಈ ಪುಕ್ಕಟೆ ರಜಾ ಪಡೆದನಂತೆ. ಪ್ರಯಾಣಿಕ ಉಗಿದಾಗ ಚಾಲಕನಿಗೆ ಮಾನಸಿಕ ಆಘಾತವಾಗಿ ಸುಧಾರಿಸಿಕೊಳ್ಳಲು ಎರಡು ತಿಂಗಳು ಬೇಕು, ಎಂಜಲಿನಿಂದ ಸೋಂಕಾಗಿ ಉಳಿದವರಿಗೂ ಬಂದರೆ.. ಎಂದೆಲ್ಲ ಅಲ್ಲಿಯ ಚಾಲಕ ಸಂಘ ವಾದಿಸಿ ಈ ರಜಾ ಸೌಲಭ್ಯ ಗಿಟ್ಟಿಸಿದೆ. ನಮ್ಮಲ್ಲೇನಾದರೂ ಈ ರೀತಿ ಉಗಿದರೆ, ಪ್ರಯಾಣಿಕನಿಗೇ ರಜಾ, ಧರ್ಮದೇಟಿನ ನೋವು ವಾಸಿ ಮಾಡಿಕೊಳ್ಳಲು..

ಅಬ್ಬಾ! ಬಂಗಾರದ ಭಾರಕ್ಕೆ ನೀರೆಯ ನೀಳ್ಬೆರಳುಗಳೂ ನಲುಗುತ್ತಿವೆ. ಜಕಾರ್ತಾ ಅಂತರರಾಷ್ಟ್ರೀಯ ಚಿನ್ನಾಭರಣ ಪ್ರದರ್ಶನದಲ್ಲಿ ಇಟ್ಟ ಈ ಪರ್ಸ್ ಬೆಲೆ 18,500 ಡಾಲರ್! ಹಣ ಕಾಣೆಯಾಗದಂತೆ ಕಾಪಿಡುವ ಪರ್ಸ್‌ನ್ನೇ ಬಚ್ಚಿಡುವುದೆಲ್ಲಿ?





ಆಸ್ಟ್ರೇಲಿಯಾಗೆ ಪ್ರವಾಸ ಹೋಗುವವರಾ? ಹಾಗಾದರೆ ಪ್ಲೇಟು ನೆಕ್ಕುವ ಅಭ್ಯಾಸ ಬೆಳೆಸಿಕೊಳ್ಳಿ. ಅಲ್ಲಿಯ ಕೆಲವು ಹೋಟೆಲುಗಳಲ್ಲಿ ಪ್ಲೇಟಿನಲ್ಲಿ ಏನನ್ನೂ ಬಿಡದೇ ಎಲ್ಲವನ್ನೂ ತಿನ್ನಬೇಕು. ಸಾಲಡ್‌ಗೆ ಅಲಂಕಾರ ಮಾಡಿದ ಹುಲ್ಲನ್ನೂ ಸಹ. ಇಲ್ಲದಿದ್ದರೆ ಶೇ 40ರಷ್ಟು ಹೆಚ್ಚುವರಿ ಹಣ ನೀಡಲು ಸಿದ್ಧರಿರಬೇಕು. ರಸ ಹಿಂಡಿದ ಲಿಂಬು ಸಿಪ್ಪೆ, ಜಗಿದು ಉಳಿದ ಶುಂಠಿಗೆ, ಹಾಗೇ ಪ್ಲೇಟಿಗೆ ಮಾತ್ರ ರಿಯಾಯ್ತಿ. ಹೊಟ್ಟೆಯೊಳಗೆ ಜಾಗ ಇಲ್ಲದಿದ್ದರೆ ಜೇಬಿನಲ್ಲಿ ಜಾಗ ಮಾಡಿಕೊಳ್ಳಿ.

ಆಸ್ಟ್ರೇಲಿಯಾವೆಂದರೆ ಬಿಯರ್ ಪ್ರೇಮಿಗಳ ಸ್ವರ್ಗ. ಅಲ್ಲಿಯ ಗಿಳಿಗಳಿಗೂ ಈ ಗೀಳು ಅಂಟಿಕೊಂಡಂತಿದೆ. ಯಾವುದೋ ಮತ್ತು ಬರಿಸುವ ಹಣ್ಣು ತಿಂದು ಎರ್ರಾಬಿರ್ರಿಯಾಗಿ ಆಡುತ್ತಿವೆಯಂತೆ. ಪಂಜರದಲ್ಲಿ ಹಾಕಿದರೆ ಪೇಪರ್ ಕೆಳಗೆ ಮುಖ ಅಡಗಿಸುತ್ತವೆಯಂತೆ, ಪತ್ನಿಗೆ ಮುಖ ತೋರಿಸಲು ಅಂಜಿದ ಕುಡುಕ ಗಂಡನ ಹಾಗೆ.



ಇಂಗ್ಲಿಷ್ ಸಿನಿಮಾದ ಪಾತ್ರ ಬೋರಟ್. ಅದನ್ನೇ ಅನುಕರಿಸಿ ಇಟಲಿಯ ಸೈಕಲ್ ರೇಸ್‌ಅನ್ನು ಹುರಿದುಂಬಿಸಿದ ಈ ಹೈದ ಅಸಭ್ಯ ವರ್ತನೆಗೆ ಜೈಲು ಸೇರಿ ಜಾಮೀನು ಪಡೆಯಬೇಕಾದರೆ ಹರಸಾಹಸ ಪಡಬೇಕಾಯಿತು. ಸಿನಿಮಾ ಪರದೆಯ ಮೇಲಿನ ಸಾಹಸಕ್ಕೂ, ನಿಜಜೀವನಕ್ಕೂ ವ್ಯತ್ಯಾಸದ ಬಗ್ಗೆ ಜ್ಞಾನೋದಯವಾಗಲು ಜೈಲೇ ಬೇಕಾಯಿತು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65